## ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾಸನ

**ಸ್ಪೆಷಲ್ ಕೇಸ್ ನಂಃ 756/2023**

| | ಚಾಸಾಃ 10 | ಅಸಾಃ 2 |
|---|---|---|
| ಹೆಸರು | ಶಿವರಾಂ | |
| ತಂದೆಯ ಹೆಸರು : | ಸಣ್ಣಯ್ಯ | |
| ವಯಸ್ಸು: | 49 ವರ್ಷ | |
| ಕೆಲಸಃ | ಗಾರೆ ಕೆಲಸ | |
| ವಾಸಸ್ಥಳ | ಚಿಕ್ಕಹೊನ್ನೇನಹಳ್ಳಿ ಗ್ರಾಮ | |

ದಿನಾಂಕಃ 05/08/2024. ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಸ್‌ಪಿಪಿ ರವರಿಂದ

ನನಗೆ ಚಾಸಾ-11 ಮತ್ತು 12 ರವರು ಗೊತ್ತು. ಮೃತ ಕಾಂತರಾಜು ರವರು ಗೊತ್ತಿರುತ್ತದೆ. ಅವರು ನಮ್ಮ ಹೆಂಡತಿಯ ಸಂಬಂಧಿಕರು. ಸುಮಾರು 6-7 ತಿಂಗಳ ಹಿಂದೆ ಅವರು ತೀರಿಕೊಂಡಿರುತ್ತಾರೆ, ನಿಖರವಾಗಿ ನೆನಪಿಲ್ಲ. ಅವರು ಕೊಲೆ ಆಗಿರುತ್ತಾರೆ, ನಾನು ಆಸ್ಪತ್ರೆಯ ಶವಗಾರಕ್ಕೆ ಹೋಗಿ ನೋಡಿರುತ್ತೇನೆ. ಅವರ ಬುರುಡೆ ಏಟಾಗಿರುತ್ತದೆ. ಮೈಯಲ್ಲಿ ಬಟ್ಟೆ ಏನು ಇರಲಿಲ್ಲ. ಬೇರೆ ಏನು ಅವರ ದೇಹಕ್ಕೆ ಆಗಿದೆ ಎಂದು ನಾನು ಗಮನಿಸಿರುವುದಿಲ್ಲ. ಪೊಲೀಸರು ಸಹಿ ಮಾಡಲು ಹೇಳಿದ್ದರಿಂದ ನಾನು ಸಹಿ ಹಾಕಿರುತ್ತೇನೆ. ನನ್ನ ಸಮಕ್ಷಮ ಪೊಲೀಸರು ಪೊಟೋ ತೆಗೆದಿರುತ್ತಾರೆ. ಆದರೆ ನನ್ನ ಸಮಕ್ಷಮ ಪೊಲೀಸರು ಮಹಜರ್ ಮಾಡಿರುವುದಿಲ್ಲ. ಸಾಕ್ಷಿ ತನ್ನ ಸಹಿಯನ್ನು ಶವಪಂಚನಾಮೆಯಲ್ಲಿ ನೋಡಿ ಗುರುತಿಸಿದ್ದು, ಶವ ಪಂಚನಾಮೆಯನ್ನು ನಿಪಿ-7 ಎಂದು ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಗಿದೆ. ಸಾಕ್ಷಿ ನಿಪಿ-2 ರಲ್ಲಿ ತನ್ನ ಇರುವಿಕೆಯನ್ನು ನೋಡಿ

ಗುರುತಿಸಿರುತ್ತಾರೆ. ಸಾಕ್ಷಿ ನಿಪಿ-4 ರಲ್ಲಿ ಮೃತನ ತಲೆಗೆ ಪೆಟ್ಟಾಗಿದೆ ಎಂದು ಗುರುತಿಸಿರುತ್ತಾರೆ.

( ಈ ಹಂತದಲ್ಲಿ ಅಭಿಯೋಗದ ಕೇಸಿಗೆ ಸಾಕ್ಷಿ ಪ್ರತಿಕೂಲ ಸಾಕ್ಷಿ ನುಡಿದಿದ್ದು ಮಾನ್ಯ ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು)

**ಪಾಟೀಸವಾಲುಃ ಎಸ್‌ಪಿಪಿ ರವರಿಂದಃ**

ದಿ. 19.10.2023 ರಂದು ಬೆಳಿಗ್ಗೆ 7-9 ಗಂಟೆಗೆ ಮೃತನ ಶವ ಹತ್ತಿರ ಪೊಲೀಸರು ನಿಪಿ-7 ರಂತೆ ಮಹಜರ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-7 ರ ಎಲ್ಲಾ ಸಂಗತಿಗಳನ್ನು ತಿಳಿದು ನಿಪಿ-7 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಎಲ್ಲಾ ಸಂಗತಿಗಳು ಗೊತ್ತಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 1 ರಿಂದ 4 ನೇ ಆರೋಪಿತರ ಪರ ವಕೀಲರಿಂದಃ

ಆರೋಪಿ ಪರ ಪಾಟೀ ಸವಾಲು ಏನು ಇಲ್ಲವೆಂದು ತಿಳಿಸಿರುತ್ತಾರೆ.

(ನನ್ನ ಉಕ್ತಲೇಖನಕಲ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಪ್ರ.,

ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ